ಕೊಟ್ಟಿದ್ದಾರೆ. ಕಳೆದ ವರ್ಷ ನಾನು ಈ ಪ್ರಶ್ನೆಯನ್ನು ಕೇಳಿದ ಸಂದರ್ಭದಲ್ಲಿ ವಾಸ್ತುಶಿಲ್ಪಿಗಳ ಮೇಲೆ ಹೇಳಿದ್ದಾರೆ, ಈಗ ಪ್ರಾಂಶುಪಾಲರ ಮೇಲೆ ಹೇಳಿದ್ದಾರೆ. ಈಗ ಖಚಿತವಾಗಿ ಇದನ್ನು ಯಾವಾಗ ಪ್ರಾರಂಭ ಮಾಡುತ್ತೀರಿ? ಈಗಾಗಲೇ ಕಳೆದ ಅಧಿವೇಶನದಲ್ಲಿ ಹೈಟೆಕ್ ಆಸ್ಪತ್ರೆಯನ್ನು ಪ್ರಾರಂಭ ಮಾಡುತ್ತೇವೆಂದು ಸಚಿವರು ಉತ್ತರವನ್ನು ಕೊಟ್ಟಿದ್ದರು. ಇದನ್ನು ತಾವು ಯಾವಾಗ ಪ್ರಾರಂಭ ಮಾಡುತ್ತೀರಿ? ಹೀಗೆಯೇ ಎಷ್ಟು ವರ್ಷ ಮುಂದೂಡಿಕೊಂಡು ಹೋಗುತ್ತೀರಾ? ಮೈಸೂರು ನಗರಕ್ಕೆ ಈ ಒಂದು ಹೈಟೆಕ್ ಆಸ್ಪತ್ರೆಯ ಅವಶ್ಯಕತೆ ಬಹಳ ಇದೆ. ದಯಮಾಡಿ ಇದನ್ನು ಯಾವಾಗ ಪ್ರಾರಂಭ ಮಾಡುತ್ತೀರೆಂಬ ಬಗ್ಗೆ ಖಚಿತವಾದ ಉತ್ತರ ಕೊಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಡಾ: ಎಂ. ಶಂಕರ್ ನಾಯಕ್ (ವೈದ್ಯಕೀಯ ಶಿಕ್ಷಣ ಸಚಿವರು) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ) :— ಮಾನ್ಯ ಅಧ್ಯಕ್ಷರೆ, ಈ ಜಾಗವನ್ನು ಯಾವುದೇ ಒಂದು ಶಾಲೆಗೆ ಮಾಡುವುದಕ್ಕಾಗಲಿ ಅದು ಸಾಧ್ಯವಿಲ್ಲ. ಈ ಜಾಗವನ್ನು ಹೈಟೆಕ್ ಆಸ್ಪತ್ರೆ ಮಾಡಬೇಕೆಂಬ ಉದ್ದೇಶಕ್ಕಾಗಿಯೇ ಇಟ್ಟುಕೊಂಡಿದ್ದೇವೆ. ಈ ಜಾಗ ಹೈಟೆಕ್ ಆಸ್ಪತ್ರೆಗಾಗಿ ಅಥವಾ ಬೇರೆ ಆಸ್ಪತ್ರೆಯ ಅನುಕೂಲಕ್ಕಾಗಿ ಉಪಯೋಗವಾಗುತ್ತದೆಯೇ ಹೊರತು ಇದನ್ನು ಬೇರೆ ಯಾವುದೇ ಸ್ಕೀಮ್‌ಗೆ ಕೊಡತಕ್ಕಂಥದ್ದು ಅಲ್ಲ. ಇದು ತಮಗೂ ಗೊತ್ತಿದೆ. ಮೈಸೂರಿನ ಚೆಲುವಾಂಬ ಆಸ್ಪತ್ರೆ ಮತ್ತು ಕೆ.ಆರ್. ಆಸ್ಪತ್ರೆಯ ಕೆಲಸಗಳು ಸಾಕಷ್ಟು ಆಧುನೀಕರಣವಾಗಬೇಕಾಗಿದೆ. ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾದವರು ಬಂದು ಆಸ್ಪತ್ರೆಯಲ್ಲಿ ಸಾಕಷ್ಟು ಆಧುನೀಕರಣ ಆಗಿಲ್ಲ ಮತ್ತು ಅಲ್ಲಿರುವ ಸೌಲಭ್ಯಗಳು ಸರಿಯಿಲ್ಲ ಹಾಗೂ ಟೀಚಿಂಗ್ ಮಾಡುವುದಕ್ಕೆ ಅಧ್ಯಾಪಕರ ಕೊರತೆ ಇದೆ ಎಂದು ಹೇಳಿದ್ದಾರೆ. ಇವತ್ತು ನಾವು ಈ ಎರಡು ಆಸ್ಪತ್ರೆಗಳಿಗೆ ಹೆಚ್ಚಿನ ಗಮನವನ್ನು ಕೊಟ್ಟಿದ್ದೇವೆ. ಈ ಕೆಲಸವಾದ ನಂತರ, ಹೈಟೆಕ್ ಆಸ್ಪತ್ರೆಯನ್ನು ತೆಗೆದುಕೊಳ್ಳುವುದಕ್ಕೆ, ಅದನ್ನು ಶುರು ಮಾಡಬೇಕೆಂಬ ಅವಶ್ಯಕತೆ ಇದೆಯೋ, ಇಲ್ಲವೋ ಎನ್ನುವುದಕ್ಕೆ ಪ್ರಾಂಶುಪಾಲರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿದ್ದೇವೆ. ಅಲ್ಲಿಂದ ವರದಿ ಬಂದ ತಕ್ಷಣ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

<u>ಪಾಂಡವಪುರ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆ.</u>

19(89) ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) :— ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಪಾಂಡವಪುರ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ ಇದನ್ನು ಪರಿಹರಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು) :—

ಅ) ಪಾಂಡವಪುರ ತಾಲ್ಲೂಕಿನ ಗ್ರಾಮೀಣ ಪ್ರದೇಶಗಳಿಗೆ ಕುಡಿಯುವ ನೀರಿನ ಪೂರೈಕೆಗಾಗಿ ಮಾರ್ಚ್-98ರ ಅಂತ್ಯದವರೆಗೆ 883 ಕ್ಷಿಪಂಪು ಕೊಳವೆಬಾವಿಗಳನ್ನು 62 ಕಿರುನೀರು ಸರಬರಾಜು ಯೋಜನೆಗಳನ್ನು ಮತ್ತು 45 ಕೊಳವೆನೀರು ಸರಬರಾಜು ಯೋಜನೆಗಳನ್ನು ಒದಗಿಸಿದ್ದು, ಹಾಲಿ ಕುಡಿಯುವ ನೀರಿಗೆ ಸಮಸ್ಯೆ ಇರುವುದಿಲ್ಲ.

ಆ) ನಿಯಮಾವಳಿಗಳ ಪ್ರಕಾರ ಪ್ರತಿ ಜನವಸತಿಗೂ ದಿನಂಪ್ರತಿ ತಲಾ 40 ಲೀಟರ್ ಪ್ರಮಾಣದಲ್ಲಿ ನೀರು ಸರಬರಾಜು ವ್ಯವಸ್ಥೆ ಕಲ್ಪಿಸಲು 1998-99ನೇ ಸಾಲಿನಲ್ಲಿ ರಾಜ್ಯ ಮತ್ತು ಕೇಂದ್ರವಲಯಗಳಡಿ ಕೊಳವೆ ನೀರು ಸರಬರಾಜು ಮತ್ತು ಕಿರು ನೀರು ಸರಬರಾಜು ಯೋಜನೆಗಳಿಗಾಗಿ (ಪುನಶ್ಚೇತನ ಅಭಿವೃದ್ಧಿ ಯೋಜನೆಗಳೂ ಸೇರಿದಂತೆ) ಪಾಂಡವಪುರ ತಾಲ್ಲೂಕಿಗೆ ರೂ. 77.85 ಲಕ್ಷಗಳ ಅನುದಾನ ಒದಗಿಸಿದ್ದು ಒಟ್ಟು 63 ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ :— ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆ ಸ್ವಲ್ಪ ಗೊಂದಲವಾಗಿದೆ. ನಾನು ಪಾಂಡವಪುರಕ್ಕೆ ಸಂಬಂಧಪಟ್ಟಂತೆ ಕುಡಿಯುವ ನೀರಿನ ಪ್ರಶ್ನೆಯನ್ನು ಕೇಳಿದ್ದೆ. ಇದರ ಬಗ್ಗೆ ನಾನು ಕೆಡಿಪಿ ಮೀಟಿಂಗ್‌ನಲ್ಲಿ ಎಲ್ಲವನ್ನೂ ರಿವ್ಯೂ ಮಾಡಿರುತ್ತೇನೆ. ಪಾಂಡವಪುರಕ್ಕೆ ಸಂಬಂಧಿಸಿದ ವಿಷಯ ಮೀರಾಜುದ್ದೀನ್ ಪಟೇಲ್‌ರವರಿಗೆ ಹೋಗಬೇಕಾಗಿತ್ತು. ಈ ಪ್ರಶ್ನೆ ಆಕಸ್ಮಿಕವಾಗಿ ಗ್ರಾಮೀಣಾಭಿವೃದ್ಧಿ ಇಲಾಖೆಗೆ ಹೋಗಿ ಉತ್ತರ ಬಂದಿದೆ.

ಶ್ರೀ ಎಂ.ಪಿ. ಪ್ರಕಾಶ್ :— ಮಾನ್ಯ ಅಧ್ಯಕ್ಷರೆ, ಪಾಂಡವಪುರ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಇದನ್ನು ಪರಿಹರಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು? ಎಂದು ಪ್ರಶ್ನೆ ಬಂದಿದೆ.

ಅಧ್ಯಕ್ಷರು :— ಆದರೆ ಕೆಲವು ಸಾರಿ ಕೇಳಿರುವ ಪ್ರಶ್ನೆಯೇ ಒಂದು ಪ್ರಿಂಟಾಗುವುದೇ ಒಂದು, ನಿನ್ನೆ ನನಗೆ ಮಾನ್ಯ ಸಭಾಪತಿಯವರು ಭೇಟಿ ಆಗಿದ್ದರು. ಅವರು ಕೇಳಿರುವ ಪ್ರಶ್ನೆಯೇ ಬೇರೆ, ಅದಕ್ಕೆ ಬಂದಿರುವ ಉತ್ತರವೇ ಬೇರೆಯಾಗಿದೆ. ಇದು ಒಂದೊಂದು ಸಲ ಹೀಗೆ ಆಗುವ ಸಂಭವವಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಮಾನ್ಯ ಅಧ್ಯಕ್ಷರೆ, ಅವರು ಕಳುಹಿಸುವ ಪ್ರಶ್ನೆ ಬಿಟ್ಟು ಬೇರೆ ಪ್ರಶ್ನೆ ಬರುತ್ತದೆ. ಮಾನ್ಯ ಪುಟ್ಟಣ್ಣಯ್ಯನವರ ಪ್ರಶ್ನೆಗೆ ಉತ್ತರ ಉಲ್ಟಾ ಆಗುತ್ತದೆ. ನನ್ನ ಪ್ರಶ್ನೆಗೆ ಉತ್ತರ ಬರುವುದೇ ಇಲ್ಲ.

ಅಧ್ಯಕ್ಷರು :— ಶ್ರೀ ಎ.ಟಿ. ರಾಮಸ್ವಾಮಿಯವರ ಪ್ರಶ್ನೆಗೆ ಉತ್ತರವನ್ನು ಕೊಡುವುದಕ್ಕೆ ಸರ್ಕಾರದಿಂದ ಸಮಯವನ್ನು ಕೇಳಿದ್ದಾರೆ. ಉತ್ತರವನ್ನು ತರಿಸುವುದಕ್ಕೆ ಎಷ್ಟು ದಿವಸಗಳು ಬೇಕಾಗುತ್ತದೆ.

ಡಾ. ಎಂ. ಶಂಕರನಾಯಕ್ (ವೈದ್ಯಕೀಯ ಶಿಕ್ಷಣ ಸಚಿವರು) :— ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ) ಮಾನ್ಯ ಅಧ್ಯಕ್ಷರೆ 10 ದಿವಸಗಳ ಸಮಯವನ್ನು ಕೊಡಿ.

ಅಧ್ಯಕ್ಷರು :— ನಾನು ಯಾವ ಮಂತ್ರಿಗಳಿಗೂ ಒಂದು ವಾರಕ್ಕೂ ಹೆಚ್ಚು ಕಾಲ ಸಮಯವನ್ನು ಕೊಡುತ್ತಿಲ್ಲ. ಅಧಿವೇಶನ ಇರುವುದೇ ಬಹಳ ಕಡಿಮೆ ದಿವಸ ಇದೆ.

ಡಾ: ಎಂ. ಶಂಕರ್ ನಾಯಕ್ :— ಒಂದು ವಾರ ಸಮಯವನ್ನು ಕೊಡಿ.

ಅಧ್ಯಕ್ಷರು :— 31ನೆ ತಾರೀಖು ಅಧಿವೇಶನ ಅಡ್ಜರ್ನ್ ಆಗುತ್ತದೆ. ಅಷ್ಟರೊಳಗಾಗಿ ಉತ್ತರವನ್ನು ಒದಗಿಸಿ ಕೊಡಿ.

ಶ್ರೀ ಎ.ಟಿ. ರಾಮಸ್ವಾಮಿ :— ಉತ್ತರವನ್ನು ದಯಮಾಡಿ ತರಿಸಿಕೊಡಿ.

ಅಧ್ಯಕ್ಷರು :— ಉತ್ತರವನ್ನು ತರಿಸಿಕೊಡುತ್ತೇನೆ. ಯಾವ ಯಾವ ಸಚಿವರು, ಯಾವ ಯಾವ ಪ್ರಶ್ನೆಗಳಿಗೆ ಎಷ್ಟು ದಿನಗಳ ಕಾಲಾವಕಾಶವನ್ನು ತೆಗೆದುಕೊಂಡಿದ್ದಾರೆ ಎಂಬುದನ್ನು ಸಂಬಂಧಪಟ್ಟ ಅಧಿಕಾರಿಗಳು ನೋಟ್ ಮಾಡಿಕೊಳ್ಳಬೇಕು.

<u>ಉಡುಪಿಯ ಜಿಲ್ಲಾ ಆಸ್ಪತ್ರೆಗೆ ಅವಶ್ಯ ಸೌಲಭ್ಯ ಪೂರೈಸುವುದು.</u>

23(45) ಶ್ರೀ ಯು.ಆರ್. ಸಭಾಪತಿ (ಉಡುಪಿ) :— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ಜಿಲ್ಲೆಯಲ್ಲಿ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಿ ಈಗಾಗಲೇ ತುಂಬಾ ಸಮಯ ಕಳೆದಿರುವುದು ನಿಜವೇ?

ಆ) ಹಾಗಿದ್ದಲ್ಲಿ ಜಿಲ್ಲಾ ಆಸ್ಪತ್ರೆಗೆ ಒದಗಿಸಬೇಕಾಗಿರುವ ಆವರ್ತನ ಅನಾವರ್ತನ ಸೌಕರ್ಯಗಳನ್ನು ಪೂರ್ಣ ಪ್ರಮಾಣದಲ್ಲಿ ಒದಗಿಸದೆ ಇರುವುದಕ್ಕೆ ಕಾರಣಗಳೇನು? ಯಾವಾಗ ಅದನ್ನು ಪೂರೈಸಲಾಗುವುದು? ವಿವರ ನೀಡುವುದು.